ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

ಸಿ.ಸಿ. ನಂಃ 531/17

| | | | |
|---|---|---|---|
| ಸಾಕ್ಷಿದಾರರ ಹೆಸರು | ರವಿಕಿರಣ್ | | |
| ತಂದೆ/ಗಂಡನ ಹೆಸರು | ಲಿಂಗರಾಜು | ಡಿ .ಡಬ್ಲ್ಯೂ | 1 |
| ವಯಸ್ಸು | 27 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಕೂಲಿ | | |
| ವಾಸ | ಅರಸೀಕೆರೆ | 10.01.2020 | |

ಮುಂದುವರೆದ ಮುಖ್ಯ ವಿಚಾರಣೆ ಬಿ.ಎನ್.ಆರ್. ವಕೀಲರಿಂದಃ

ಪಿರ್ಯಾದಿಯ ಪರಿಚಯ ನನಗೆ ಇದೆ. ನಾನು ದಿಃ26-06-2017 ರಲ್ಲಿ ಪಿರ್ಯಾದಿಯಿಂದ 2,80,000 ಹಣ ಸಾಲ ಪಡೆದಿಲ್ಲ. ದಿಃ28-07-2017 ರಂದು ಸಾಲ ತೀರುವಳಿಗಾಗಿ ಯಾವುದೇ ಚೆಕ್ ಕೊಟ್ಟಿಲ್ಲ. ದಿಃ05-10-2015 ರಲ್ಲಿ ನಾನು ಪಿರ್ಯಾದಿಯಿಂದ 1,40,000 ಸಾಲ ಪಡೆದಿದ್ದೆ. ತಿಂಗಳಿಗೆ 10 ಸಾವಿರ ಕೊಡುವುದಾಗಿ ಮಾತಾಗಿತ್ತು. 100 ರೂ.ಗಳ ಚಾಪಾಕಾಗದದ ಮೇಲೆ ಬರವಣಿಗೆ ಆಗಿತ್ತು. ಆ ಸಮಯದಲ್ಲಿ ಕಾರ್ಪೋರೇಶನ್ ಬ್ಯಾಂಕ್, ಫೆಡರಲ್ ಬ್ಯಾಂಕ್‌ಗಳ ಸಹಿ ಮಡಿ ಚೆಕ್ ಗಳನ್ನು ಪಿರ್ಯಾದಿಗೆ ಕೊಟ್ಟಿದ್ದೆ. 1,40,000 ರೂ. ಪಿರ್ಯಾದಿಗೆ ಸಂಪೂರ್ಣ ವಾಪಸ್ಸು ಕೊಟ್ಟಿರುತ್ತೇನೆ. ಶಿವಕುಮಾರ್, ಪ್ರದೀಪ್ ಎನ್ನುವವರು ಚಾಪಾಕಾಗದಕ್ಕೆ ಪಿರ್ಯಾದಿ ಪರವಾಗಿ ಸಾಕ್ಷಿಯಾಗಿ ಸಹಿ ಮಾಡಿದ್ದರು. ಶಿವಕುಮಾರ್ ಪಿರ್ಯಾದಿಯ ಗಂಡ. ಭಾರತಿ ಮತ್ತು ನನ್ನ ತಮ್ಮ ಮಂಜುನಾಥ ನನ್ನಕಡೆ ಸಾಕ್ಷಿದಾರರಾಗಿ ಸಹಿ ಮಾಡಿದ್ದರು. ಚಾಪಾ ಕಾಗದ ದಾಖಲೆ ಪಿರ್ಯಾದಿಯ ಬಳಿ ಇದ್ದು ಅದರ ನಕಲು ನನ್ನ ಬಳಿ ಇರುತ್ತದೆ. ಮೂಲ ಚಾಪಾಕಾಗದ ಹಾಜರುಪಡಿಸಲು ನನ್ನ ವಕೀಲರ ಮುಖಾಂತರ ನೋಟೀಸು ಕೊಟ್ಟಿದ್ದೆ. ಕೇಳಿದ ದಾಖಲೆ ಅವರು ಕೊಟ್ಟಿರುವುದಿಲ್ಲ. ಸದರಿ ಕಾಗದದ ಜೆರಾಕ್ಸ್ ದಾಖಲೆ ನೋಡುತ್ತಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಪಿರ್ಯಾದಿ ಸಹಿ ಮಾಡಿರುತ್ತಾರೆ. ದಾಖಲೆಗೆ ಸದರಿಯವರ ಸಹಿಯನ್ನು ಗುರುತಿಸಲು ಪಿರ್ಯಾದಿ ಪರ ವಕೀಲರು ತಕರಾರು ಮಾಡಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ನಿರ್ಮಲ ಕೆ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. ದಿಃ 10-01-2020.